# ಕರ್ನಾಟಕವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1476 |
| ಸದಸ್ಯರ ಹೆಸರು | : | ಶ್ರೀ ಆರ್.ಧರ್ಮಸೇನ |
| ಉತ್ತರಿಸುವ ದಿನಾಂಕ | : | 17.03.2021 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸದಾಶಿವ ಆಯೋಗವನ್ನು ಯಾವ ಉದ್ದೇಶದಿಂದ ರಚಿಸಲಾಗಿತ್ತು; ಅದರ ವರದಿಯನ್ನು ಜಾರಿಗೆ ತರಲು ಸರ್ಕಾರಕ್ಕೆ ಇರುವ ತೊಂದರೆಗಳೇನು; | (1) ಸಂವಿಧಾನದ 15 ಮತ್ತು 16ನೇ ಅನುಚ್ಛೇಧದ ಅಡಿಯಲ್ಲಿ ಅನುಸೂಚಿತ ಜಾತಿಗಳಿಗೆ ಸರ್ಕಾರವು ವಿಸ್ತರಿಸಿದ ಮೀಸಲಾತಿ ಪ್ರಯೋಜನಗಳನ್ನು ನ್ಯಾಯಸಮ್ಮತ್ತವಾಗಿ ಅನುಸೂಚಿತ ಜಾತಿಗಳ ಎಲ್ಲಾ ಜಾತಿಗಳು, ಜನಾಂಗಗಳು ಮತ್ತು ಬುಡಕಟ್ಟುಗಳು ಅನುಭವಿಸುತ್ತಿವೆಯೇ ಎಂಬುದನ್ನು ಪರಿಶೀಲಿಸಿ ವರದಿ ನೀಡಲು.<br>(2) ಇಲ್ಲದಿದ್ದರೇ, (i) ಅದಕ್ಕೆ ಕಾರಣಗಳು ( ಶೈಕ್ಷಣಿಕ, ಆರ್ಥಿಕ ಅಥವಾ ಇತರೆ); (ii) ಅನುಸೂಚಿತ ಜಾತಿಗಳ ಬೇರೆ ಬೇರೆ ಜಾತಿಗಳು, ಜನಾಂಗಗಳು ಮತ್ತು ಬುಡಕಟ್ಟುಗಳಲ್ಲಿ ಸಮಾನವಾಗಿ ಹಂಚಿಕೆಯಾಗುತ್ತಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ತೆಗೆದುಕೊಳ್ಳಬಹುದಾದ ಕ್ರಮಗಳು ಅಥವಾ ಅನುಷಂಗಿಕವಾದ ಅಥವಾ ಅದರಿಂದ ಉದ್ಭವಿಸುವ ಇತರ ವಿಷಯಕ್ಕೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಶ್ರೀ ಎ.ಜೆ. ಸದಾಶಿವ ವಿಚಾರಣಾ ಆಯೋಗವನ್ನು ರಚಿಸಲಾಗಿತ್ತು (ಆದೇಶದ ಪ್ರತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ).<br><br>ಸದರಿ ಆಯೋಗವು ತಮ್ಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. ಸದರಿ ವರದಿಯನ್ನು ಸಮಗ್ರವಾಗಿ ಪರಿಶೀಲಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಸಚಿವ ಸಂಪುಟದ ಉಪ ಸಮಿತಿಯನ್ನು ದಿನಾಂಕ:08.03.2018ರಲ್ಲಿ ರಚಿಸಲಾಗಿತ್ತು. ತದನಂತರ ಸರ್ಕಾರವು ಬದಲಾವಣೆಯಾಗಿ ನೂತನ ಸರ್ಕಾರವು ಅಸ್ತಿತ್ವಕ್ಕೆ ಬಂದ ಹಿನ್ನೆಲೆಯಲ್ಲಿ ಹೊಸದಾಗಿ ಸಚಿವ ಸಂಪುಟದ ಉಪಸಮಿತಿಯನ್ನು ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

--2

KA/ BG-GPO/2515/WPP-47/2006-2008

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ ೧೪೧ | ಬೆಂಗಳೂರು, ಗುರುವಾರ, ಫೆಬ್ರವರಿ ೨, ೨೦೦೬ (ಮಾಘ ೧೩, ಶಕವರ್ಷ ೧೯೨೭) | ಸಂಚಿಕೆ ೫ |
|---|---|---|

## ಭಾಗ - ೪ಎ

## ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು, ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು.

### ಸಮಾಜ ಕಲ್ಯಾಣ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ: ಎಸ್‌ಡಬ್ಲ್ಯೂಡಿ, 227 ಎಸ್‌ಎಡಿ 2005, ಬೆಂಗಳೂರು, ದಿನಾಂಕ: 24ನೇ ಸೆಪ್ಟೆಂಬರ್, 2005**

ಅನುಸೂಚಿತ ಜಾತಿಗಳಿಗೆ ಸರ್ಕಾರ ನೀಡುತ್ತಿರುವ ಅಸಮ ಪ್ರಮಾಣದ ಬಹುತೇಕ ಪ್ರಯೋಜನಗಳು ಕರ್ನಾಟಕ ರಾಜ್ಯದಲ್ಲಿನ ಅನುಸೂಚಿತ ಜಾತಿಗಳ ಕೆಲವು ಜಾತಿಗಳು, ಜನಾಂಗಗಳು ಅಥವಾ ಪಂಗಡಗಳಿಗೆ ಹೋಗುತ್ತಿದೆಯೆಂದು ಮತ್ತು ಆ ಪ್ರಯೋಜನಗಳನ್ನು ಅನುಸೂಚಿತ ಜಾತಿಗಳ ಎಲ್ಲಾ ಜಾತಿಗಳು, ಜನಾಂಗಗಳು ಅಥವಾ ಬುಡಕಟ್ಟುಗಳು ಸರಿಸಮನಾಗಿ ಹಂಚಿಕೊಳ್ಳಬೇಕೆಂದು ರಾಜ್ಯ ಸರ್ಕಾರಕ್ಕೆ ಕಾಲಕಾಲಕ್ಕೆ ಮನವಿ ಸಲ್ಲಿಸಲಾಗಿದೆ.

ಇ.ವಿ ಚಿನ್ನಯ್ಯ ವಿರುದ್ಧ ಆಂಧ್ರ ಪ್ರದೇಶ ರಾಜ್ಯ (ಎಐಆರ್ 2005 ಎಸ್‌ಸಿ 162) ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ, ಅನುಸೂಚಿತ ಜಾತಿಯವರನ್ನು ನಾಲ್ಕು ಗುಂಪುಗಳಾಗಿ ಮರುವರ್ಗೀಕರಿಸಿ, ಈಗಾಗಲೇ ಮಾಡಿರುವ ಮೀಸಲಾತಿಯನ್ನು ಅವರ ನಡುವೆ ಹಂಚಿರುವುದನ್ನು ಕುರಿತ ಕಾನೂನಿನ ಮೌಲ್ಯವನ್ನು ಪರಿಗಣಿಸುವ ಸಂದರ್ಭದಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ.

"ಮೀಸಲಾತಿ ಪ್ರಯೋಜನಗಳು ನ್ಯಾಯಸಮ್ಮತವಾಗಿ ದೊರಕುವಂತಾಗದಿದ್ದರೆ ಅವರು ಇತರರೊಂದಿಗೆ ಸ್ಪರ್ಧಿಸುವುದಕ್ಕೆ ಸಮರ್ಥಗೊಳಿಸುವಂತಹ ಸಾಕಷ್ಟು ಅಥವಾ ಹೆಚ್ಚುವರಿ ತರಬೇತಿ ನೀಡುವುದಕ್ಕೆ ಕ್ರಮ ಕೈಗೊಳ್ಳಬೇಕು."

"ಪರಿಶಿಷ್ಟ ಜಾತಿಗಳ ಜನರು ಹಿಂದುಳಿದ ವರ್ಗಗಳಲ್ಲಿಯೇ ಅತ್ಯಂತ ಹಿಂದುಳಿದವರಾಗಿದ್ದಾರೆ ಮತ್ತು ಅವರು ಭಾರತ ಸಂವಿಧಾನದ 15ನೇ ಅನುಚ್ಛೇದದ (4)ನೇ ಖಂಡದ ಹಾಗೂ 16ನೇ ಅನುಚ್ಛೇದದ (4)ನೇ ಖಂಡದ ಎರಡೂ ನಿಬಂಧನೆಗಳಿಗನುಸಾರವಾಗಿ ತಕ್ಕ ರೀತಿಯಲ್ಲಿ ಅವರು ಪ್ರತಿನಿಧಿಸುತ್ತಿಲ್ಲವೆಂಬುದರ ಆಧಾರದ ಮೇಲೆ ಈಗಾಗಲೇ ಒಂದು ಆಕ್ಷೇಪಿತ ಶಾಸನದ ಮೂಲಕ ಕ್ರಮ ಕೈಗೊಳ್ಳಲಾಗಿದೆ ಎಂಬ ಸಂಗತಿ ಇದ್ದು, ಮೈಕ್ರೋ ವರ್ಗೀಕರಣದ ವಿಧಾನದಲ್ಲಿ ಮತ್ತಷ್ಟು ವರ್ಗೀಕರಣಕ್ಕೆ ಅನುಮತಿಸಲಾಗುವುದಿಲ್ಲ. ಅವರವರ ಜಾತಿಗಳನ್ನಾಧರಿಸಿ ಬೇರೆಬೇರೆ ವರ್ಗಗಳ ಜನರ ಅಂಥ ವರ್ಗೀಕರಣವು ಸಾಮಾಜಿಕ ನ್ಯಾಯಬದ್ಧವಾಗಿ ನಡೆದುಕೊಳ್ಳುವ ಸಿದ್ಧಾಂತದ ಉಲ್ಲಂಘನೆಯಾಗುತ್ತದೆ. ರಾಷ್ಟ್ರಪತಿಯವರ ಪಟ್ಟಿಯಿಂದ ಜಾತಿಗಳ ಸಮೂಹ ಅಥವಾ ಅದರ ಯಾವುದೇ ಭಾಗವನ್ನು ತೆಗೆದುಹಾಕುವ ಕಾರ್ಯ ಸಂಸತ್ತು ಮಾತ್ರವೇ ಮಾಡಬೇಕು ಎಂಬುದಾಗಿ 341ನೇ ಅನುಚ್ಛೇದವು ಉಪಬಂಧ ಕಲ್ಪಿಸಿದೆ. ಅದರ ತರ್ಕಬದ್ಧ ಪರಿಣಾಮವೇನೆಂದರೆ ರಾಜ್ಯ ವಿಧಾನ ಮಂಡಲಗಳು ಆ ಕಾರ್ಯ ಮಾಡುವುದನ್ನು ನಿಷೇಧಿಸುವುದು.

ಸನ್ಮಾನ್ಯ ನ್ಯಾಯಮೂರ್ತಿ ಸಿನ್ಹಾ ಅವರು ಇತರೆ ನ್ಯಾಯಮೂರ್ತಿಗಳೊಂದಿಗೆ ಸಮಾಲೋಚಿಸಿ, "ಪರಿಹಾರವೇನು" ಎಂಬ ಶೀರ್ಷಿಕೆ ಅಡಿಯಲ್ಲಿನ ಸಮಸ್ಯೆಯನ್ನು ಮುಂದಿಟ್ಟರು ಹಾಗೂ ಅವರು 123ನೇ ಪ್ಯಾರಾದಲ್ಲಿ ಸಮಸ್ಯೆಯನ್ನು ವಿಶ್ಲೇಷಿಸಿ ಈ ಮುಂದಿನಂತೆ ಅಭಿಪ್ರಾಯಪಟ್ಟಿದ್ದಾರೆ.

"ವಿಷಯದ ಒಂದು ಪ್ರಾಯೋಗಿಕ ಅಂಶವೂ ಸಹ ಕಣ್ತಪ್ಪಿಹೋಗಬಾರದು. ನಮ್ಮ ಮುಂದೆ ಹಾಜರುಪಡಿಸಿದ ಚಾರ್ಟು ರೆಲ್ಲಿ ಹಾಗೂ ಆದಿ-ಆಂಧ್ರಾ ಜನಾಂಗಕ್ಕೆ ಸೇರಿರುವ ಜನರು ಓದು ಬರಹ ಬಲ್ಲವರಲ್ಲವೆಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಈ ಪರಿಸ್ಥಿತಿಯಲ್ಲಿ ಅತ್ಯಾವಶ್ಯಕವಾಗಿ ಮಾಡಬೇಕಾದುದೇನೆಂದರೆ, ಅವರಿಗೆ ವಿದ್ಯಾರ್ಥಿ ವೇತನಗಳು, ಹಾಸ್ಟೆಲ್ ಸೌಲಭ್ಯಗಳು, ವಿಶೇಷ ತರಬೇತಿ ಮತ್ತಿತರ ಸೌಲಭ್ಯಗಳನ್ನು ಒದಗಿಸುವುದು. ಹೀಗೆ ಮಾಡುವುದರಿಂದ ಇತರ ಹಿಂದುಳಿದ ಪಂಗಡಗಳೊಂದಿಗೆ ಅಲ್ಲದೆ ಇದ್ದರೂ ಮಾದಿಗ ಮತ್ತು ಮಾಲರಂಥ ಇತರ ಅನುಸೂಚಿತ ಪಂಗಡಗಳ ಜನರೊಂದಿಗೆ ಒಂದೇ ವೇದಿಕೆಗೆ ತರಬಹುದು. ರೆಲ್ಲಿ ಜನಾಂಗಕ್ಕೆ ಸೇರಿರುವ ಜನರು ಓದುಬರಹ ಬಾರದವರು ಎಂಬ ಬಗ್ಗೆ ಯಾವುದೇ ವಿವಾದವಿಲ್ಲ.

ಸದರಿ ಸಮುದಾಯದ ಕೇವಲ ಶೇ.2ರಷ್ಟು ಜನರು ಮಾತ್ರ ಸೆಕೆಂಡರಿ ಶಾಲೆಗಳಲ್ಲಿ ವ್ಯಾಸಂಗ ಮಾಡಿದ್ದಾರೆ ಎಂದೂ ಯಾರೊಬ್ಬ ವ್ಯಕ್ತಿಯಾಗಲೀ ಯಾವುದೇ ಇಂಜಿನಿಯರಿಂಗ್ ಅಥವಾ ಇತರ ವೃತ್ತಿ ಶಿಕ್ಷಣ ಕೋರ್ಸುಗಳಲ್ಲಿ ಪ್ರವೇಶ ಪಡೆದಿರುವುದಿಲ್ಲ. ಇಂಜಿನಿಯರಿಂಗ್ ಅಥವಾ ವೈದ್ಯಕೀಯ ಕೋರ್ಸುಗಳಲ್ಲಿ ಅಥವಾ ಸರ್ಕಾರಿ ಸೇವೆಗಳಲ್ಲಿ ಅವರಿಗಾಗಿ ಮೀಸಲಾತಿಯನ್ನು ಒದಗಿಸುವುದರಿಂದ ಅವರ ಸಮಸ್ಯೆಯನ್ನು ಬಗೆಹರಿಯುವುದಿಲ್ಲ ಎಂಬುದನ್ನು ಸದರಿ ಅಂಶಗಳು ಸ್ಪಷ್ಟಪಡಿಸುತ್ತವೆ. ಅಂಥ ಮೂಲಭೂತ ಶಿಕ್ಷಣವಿಲ್ಲದೆ ಸದರಿ ಸಮುದಾಯಕ್ಕೆ ಸೇರಿರುವ ಜನರು ಇಂಜಿನಿಯರಿಂಗ್ ಅಥವಾ ವೈದ್ಯಕೀಯ ಕಾಲೇಜುಗಳಲ್ಲಿ ಅಥವಾ ಇತರ ವೃತ್ತಿ ಶಿಕ್ಷಣ ಕೋರ್ಸುಗಳಲ್ಲಾಗಲೀ ಪ್ರವೇಶ ಪಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗಾಗಿ, ಸರ್ಕಾರಿ ಸೇವೆಗೆ ಸೇರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. IVನೇ ವರ್ಗದ ನೌಕರರ ಹುದ್ದೆಗಾಗಿಯೂ ಸಹ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕೆಂಬ ಅರ್ಹತೆಯನ್ನು ಇಡಲಾಗಿರುತ್ತದೆ. ಸದರಿ ಸಮುದಾಯದ ಮಕ್ಕಳು ಶಿಕ್ಷಣ ಪಡೆಯುವ ಹೊರತು, ಶಿಕ್ಷಣ ಹಾಗೂ ಸರ್ಕಾರಿ ಸೇವೆಗಳೆರಡರಲ್ಲಿ ಲಭ್ಯವಾಗುವ ಅವಕಾಶಗಳು ಅವರಿಗೆ ಸುಳ್ಳಾಗಬಹುದು. ಅಂತಿಮವಾಗಿ ಎಲ್ಲಾ ರೀತಿಯ ಆಶಯ ಹಾಗೂ ಉದ್ದೇಶಗಳಿಗಾಗಿ ಇರುವ ಆಕ್ಷೇಪಿತ ಶಾಸನದ ದೃಷ್ಟಿಯಲ್ಲಿ ಅವರ ಅವಕಾಶಗಳು ಇತರ ಪ್ರವರ್ಗಗಳಿಗೆ ಹೋಗುತ್ತವೆ. ನಮ್ಮ ಅಭಿಪ್ರಾಯದಲ್ಲಿ ರಾಜ್ಯವು ಈ ಬಗ್ಗೆ ನಿರ್ದಿಷ್ಟವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು."

ಭಾರತದ ಸಂವಿಧಾನದ 341 (2) ಅನುಚ್ಛೇದವು ಸಂವಿಧಾನದ 341 (1)ನೇ ಅನುಚ್ಛೇದದ ಮೇರೆಗೆ ರಾಷ್ಟ್ರಪತಿಯವರು ಅಧಿಸೂಚಿಸಿದ ಅನುಸೂಚಿತ ಜಾತಿಗಳ ಯಾವುದೇ ಜಾತಿಗಳು, ಜನಾಂಗಗಳು ಅಥವಾ ಬುಡಕಟ್ಟುಗಳ ಯಾವುದೇ ಭಾಗವನ್ನು ಅಥವಾ ಅದರೊಳಗಿನ ಗುಂಪನ್ನು ಅದರಿಂದ ತೆಗೆದುಹಾಕುವುದಕ್ಕೆ ಸಂಸತ್ತಿಗೆ ಅಧಿಕಾರ ನೀಡಿದೆ.

ಈ ಹಿಂದೆ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾದ ಮನವಿಗಳನ್ನು ಮೇಲೆ ಉದ್ಧರಿಸಿದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯೋಕ್ತಿಗಳು ಹಾಗೂ ಸಂವಿಧಾನದ 341 (2)ನೇ ಅನುಚ್ಛೇದದ ಉಪಬಂಧಗಳನ್ನು ಗಮನದಲ್ಲಿಟ್ಟುಕೊಂಡು ಅದು ಸಾರ್ವಜನಿಕ ಮಹತ್ವದ ವಿಷಯವಾಗಿರುವುದರಿಂದ ಕರ್ನಾಟಕ ಸರ್ಕಾರವು ಈ ಸಂಬಂಧದಲ್ಲಿ ವಿಚಾರಣಾ ಆಯೋಗವನ್ನು ನೇಮಕಮಾಡುವುದು ಅವಶ್ಯಕವಾಗಿದೆಯೆಂದು ಅಭಿಪ್ರಾಯಪಟ್ಟಿದೆ.

ಆದ್ದರಿಂದ, ಈಗ ವಿಚಾರಣಾ ಆಯೋಗ ಅಧಿನಿಯಮ, 1952 (1952ರ ಕೇಂದ್ರ ಅಧಿನಿಯಮ ಸಂಖ್ಯೆ: 60)ರ 3ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರ ಮೀಸಲಾತಿ ಅವಕಾಶವು ನ್ಯಾಯಸಮ್ಮತವಾಗಿ ದೊರೆಯದಿರುವ ಕರ್ನಾಟಕ ರಾಜ್ಯದಲ್ಲಿನ ಅನುಸೂಚಿತ ಜಾತಿಗಳ ನಿರ್ದಿಷ್ಟ ಜಾತಿಗಳು, ಜನಾಂಗಗಳು ಹಾಗೂ ಬುಡಕಟ್ಟುಗಳನ್ನು ಗುರುತಿಸುವುದಕ್ಕೆ ಮತ್ತು ಅವರು ರಾಜ್ಯದಲ್ಲಿನ ಅನುಸೂಚಿತ ಜಾತಿಗಳು ಮತ್ತು ಇತರ ಪ್ರವರ್ಗಗಳೊಂದಿಗೆ ಸ್ಪರ್ಧಿಸಲು ಅವರನ್ನು ಸಮರ್ಥಗೊಳಿಸುವುದಕ್ಕೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾದ ಎಲ್ಲಾ ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಹನ್ನೆರಡು ತಿಂಗಳ ಅವಧಿಯೊಳಗೆ ಸೂಚಿಸುವುದಕ್ಕೆ ಮಾನ್ಯ ನ್ಯಾಯಮೂರ್ತಿ ಎ.ಜೆ. ಸದಾಶಿವ ಅವರನ್ನೊಳಗೊಂಡಿರುವ ವಿಚಾರಣಾ ಆಯೋಗವನ್ನು ಈ ಮೂಲಕ ನೇಮಕಮಾಡಿದೆ:

ಆಯೋಗದ ಪರಿಶೀಲನಾಂಶಗಳು ಈ ಮುಂದಿನಂತಿವೆ:

1) ಸಂವಿಧಾನದ 15 ಮತ್ತು 16ನೆ ಅನುಚ್ಛೇದದ ಅಧಿಯಲ್ಲಿ ಅನುಸೂಚಿತ ಜಾತಿಗಳಿಗೆ ಸರ್ಕಾರವು ವಿಸ್ತರಿಸಿದ ಮೀಸಲಾತಿ ಪ್ರಯೋಜನಗಳನ್ನು ನ್ಯಾಯಸಮ್ಮತವಾಗಿ ಅನುಸೂಚಿತ ಜಾತಿಗಳ ಎಲ್ಲಾ ಜಾತಿಗಳು, ಜನಾಂಗಗಳು ಮತ್ತು ಬುಡಕಟ್ಟುಗಳು ಅನುಭವಿಸುತ್ತಿವೆಯೇ ಎಂಬುದನ್ನು ಪರಿಶೀಲಿಸಿ ವರದಿ ನೀಡುವುದು.

2) ಇಲ್ಲದಿದ್ದರೆ,

(i) ಅದಕ್ಕೆ ಕಾರಣಗಳು (ಶೈಕ್ಷಣಿಕ, ಆರ್ಥಿಕ ಅಥವಾ ಇತರೆ);

(ii) ಅನುಸೂಚಿತ ಜಾತಿಗಳ ಬೇರೆಬೇರೆ ಜಾತಿಗಳು, ಜನಾಂಗಗಳು ಮತ್ತು ಬುಡಕಟ್ಟುಗಳು ಎಷ್ಟರಮಟ್ಟಿಗೆ ಆ ಪ್ರಯೋಜನಗಳನ್ನು ಅನುಭವಿಸುತ್ತಿವೆ.

(iii) ಅನುಸೂಚಿತ ಜಾತಿಗಳ ಬೇರೆಬೇರೆ ಜಾತಿಗಳು, ಜನಾಂಗಗಳು ಮತ್ತು ಬುಡಕಟ್ಟುಗಳಲ್ಲಿ ಸಮಾನವಾಗಿ ಹಂಚಿಕೆಯಾಗುತ್ತಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ತೆಗೆದುಕೊಳ್ಳಬಹುದಾದ ಕ್ರಮಗಳು;

(iv) ಮೇಲೆ ಉಲ್ಲೇಖಿಸಿದ ವಿಷಯಕ್ಕೆ ಸಂಬಂಧಪಟ್ಟ ಅಥವಾ ಅನುಷಂಗಿಕವಾದ ಅಥವಾ ಅದರಿಂದ ಉದ್ಭವಿಸುವ ಯಾವುದೇ ಇತರ ವಿಷಯ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ. ಪ್ರಾಣದೇವ
ಸರ್ಕಾರದ ಉಪ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.

ಪಿ.ಆರ್.209

## ಸಹಕಾರ ಸಚಿವಾಲಯ

### ಅಧಿಸೂಚನೆ

ಸಂಖ್ಯೆ: ಸಿಎಂಡಬ್ಲ್ಯೂ 320 ಸಿಎಸ್ಎಸ್ 2005, ಬೆಂಗಳೂರು, ದಿನಾಂಕ:30ನೇ ಮಾರ್ಚ್, 2005

ಈ ಹಿಂದೆ ಸರ್ಕಾರದಿಂದ ಮಾಡಿರುವ ಎಲ್ಲಾ ನಾಮನಿರ್ದೇಶನಗಳನ್ನು ರದ್ದುಪಡಿಸಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಕಲಂ 29ರ ಉಪ ಕಲಂ(1)ರ ಮೇರೆಗೆ ದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು ದಾವಣಗೆರೆ ತಾಲ್ಲೂಕಿನ ಕಾಟಿಗಟ್ಟೆ ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ಇದರ ಆಡಳಿತ ಮಂಡಳಿಗೆ ಸದಸ್ಯರುಗಳನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆವಿಗೂ ನಾಮನಿರ್ದೇಶನ ಮಾಡಿದೆ.

1. ಶ್ರೀ ಜಿ.ಎಂ. ನೀಲಕಂಠಪ್ಪ ಬಿನ್ ಮಲ್ಲಪ್ಪ
2. ಶ್ರೀಮತಿ ಶಾರದಮ್ಮ ಕೋಂ ಚಂದ್ರಪ್ಪ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ಎಸ್.ಜಾಬಾಲಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಹಕಾರ ಇಲಾಖೆ.

ಪಿ.ಆರ್.794

